ಶ್ರೀ ಹರಿಃ

ಲಕ್ಷ್ಮೀ ಜನಾರ್ದನಾಯ ನಮಃ

# ಜನಾರ್ದನಸ್ವಾಮಿ

**(ಒಂದು ಸ್ಥೂಲ ಪರಿಚಯ)**




ಸಂಗ್ರಹ ನಿರೂಪಣೆ

**ಪ್ರೊ।। ಪಂ।। ಬದರೀನಾಥಾಚಾರ್ ಘೂಳಿ**

ಶ್ರೀ ಹರಿಃ

ಲಕ್ಷ್ಮೀ ಜನಾರ್ದನಾಯ ನಮಃ

# ಜನಾರ್ದನಸ್ವಾಮಿ

**(ಒಂದು ಸ್ಥೂಲ ಪರಿಚಯ)**

**ಜನಾರ್ದನ** : ಅಂದರೆ ಶ್ರೀ ಮಹಾವಿಷ್ಣುವಿನ ರೂಪ (ಅವತಾರ). ಜನಾರ್ದನ ಶಬ್ದ (ನಿರುಕ್ತಿ)

೧. ಭಕ್ತ ವಿದ್ವೇಷಿಣಾಂ ತೂರ್ಣ ಮರ್ದನಾದಿತಿ ಜನಾರ್ದನಃ (ನಿರುಕ್ತಿ = ನಿರ್ವಚನ = ಪದಗಳ ಅವಯವಾರ್ಥಗಳನ್ನು ಹೇಳುವುದು) ನಿರ್ + ವಚ (ಪಾರಿಭಾಷಣೇ) ಭಾವೇ ''ಹ್ತುಃ'' ಭಗವದ್ವೇಷಿಗಳನ್ನು ಸಂಸಾರವೆಂಬ ಸಮುದ್ರದಲ್ಲಿ ಬೀಳಿಸಿ ಅರೆಯುವುದು, ದುಃಖಕ್ಕೀಡು ಮಾಡುವುದು. ''ಜನಾನ್ + ಅರ್ದಯತೆ ಇತಿ ಜನಾರ್ದನಃ''

ಆದರೆ ಭಗವದ್ಭಕ್ತರನ್ನು ಪೀಡಿಸದೇ ಇರುವವನು ಜನಾರ್ದನಃ.

ಜನಾನ್ + ಭಕ್ತಾನ್ + ನಾರ್ದಯತೀತಿ = ಜನಾರ್ದನಃ ಇತಿಚ ಎಂಬೆರಡು ಅರ್ಥ ಹೊರಡುವುದು.

೨. ವಿಷ್ಣುಸಹಸ್ರನಾಮದಲ್ಲಿ ''ಸರ್ವಗಃ ಸವವಿದ್ಭಾನುರ್ವಿಸ್ವಕ್ಸೇನೋ **ಜನಾರ್ದನಃ**'' ಎಂದು ತಿಳಿಸಲಾಗಿದೆ.

೩. ವಿಸ್ವಕ್ಸೇನೋ ಜನಾರ್ದನಃ (ಪ್ರಥಮಕಂಡ ೧೯ನೇ ಶ್ಲೋಕ – ಅಮರಕೋಶ)

೪. ಜನಾರ್ದನ ಪದವು ಹರಿವಂಶದಲ್ಲಿಯೂ ವಿಷ್ಣುವಿನ ೪೬ ನಾಮಗಳಲ್ಲಿ ೨೨ನೇ ಪದವೇ ಜನಾರ್ದನ ಎಂದಿದೆ.

೫. ಭಗವದ್ಗೀತೆಯಲ್ಲಿ **ಜನಾರ್ದನ** ಎಂದು ಐದು ಕಡೆ (ಅಧ್ಯಾಯಗಳಲ್ಲಿ) ಕರೆದಿದ್ದಾನೆ.

ಅ) ೧ನೇ ಅಧ್ಯಾಯ ಅರ್ಜುನ ವಿಷಾದ ಯೋಗ ೩೫ನೇ ಶ್ಲೋಕ.

ಆ) ೧ನೇ ಅಧ್ಯಾಯ ಅರ್ಜುನ ವಿಷಾದ ಯೋಗ ೩೯ನೇ ಶ್ಲೋಕ.

ಇ) ೩ನೇ ಅಧ್ಯಾಯ ಕರ್ಮಯೋಗ ೧ನೇ ಶ್ಲೋಕ

ಈ) ೧೦ನೇ ಅಧ್ಯಾಯ ವಿಭೂತಿ ಯೋಗ ೨೮ನೇ ಶ್ಲೋಕ

ಉ) ೧೧ನೇ ಅಧ್ಯಾಯ ವಿಶ್ವರೂಪ ದರ್ಶನ ಯೋಗ

೬. ಆಚಾರ್ಯ ಶ್ರೀಮಧ್ವರು ತಂತ್ರಸಾರ ಸಂಗ್ರಹದ ೧ನೇ ಅಧ್ಯಾಯ ಭಗವಂತನ ೨೪ ಮೂರ್ತಿಗಳ ವಿವರಣೆ ಆಯುಧಗಳ ನಿರೂಪಣೆ ಕೇಶವಾದಿ ನಾಮಗಳನ್ನು ವಿವರಿಸುತ್ತಾ ಜನಾರ್ದನನ ಬಗ್ಗೆ ಬರೆದಿರುತ್ತಾರೆ. ಜನಾರ್ದನ (ನಾರಾಯಣ) ದೇವರು ಧರಿಸಿದ ಆಯುಧಗಳು ಕ್ರಮವಾಗಿ ಚಕ್ರ ಮೇಲಿನ ಬಲಗೈಯಲ್ಲಿ, ಶಂಖ ಮೇಲಿನ ಎಡಗೈಯಲ್ಲಿ, ಗದಾ ಕೆಳಗಿನ ಎಡಗೈಯಲ್ಲಿ ಹಾಗೂ ಪದ್ಮ ಕೆಳಗಿನ ಬಲಗೈಯಲ್ಲಿ ಎಂದಿದೆ.

೭. ಇನ್ನು ವೈಷ್ಣವರು ನಿತ್ಯ ಪ್ರಾತಃಕಾಲದಲ್ಲಿ ಸ್ನಾನ ಮಾಡಿದ ಮೇಲೆ ಮುದ್ರಾಧಾರಣೆ ಮಾಡಿಕೊಂಡು ಸಂಧ್ಯಾವಂದನೆ, ಪೂಜಾ ಸಂಕಲ್ಪ, ಶ್ರಾದ್ಧ ಮಾಡುವ ಮುನ್ನ ಸಂಕಲ್ಪ ದೇಶ ಕಾಲಾದಿಗಳನ್ನು ಹೇಳಿ ೨೪ ನಾಮಗಳನ್ನು ದೇಹದ ಅಂಗಾಂಗಗಳಲ್ಲಿ ಶ್ರೀಕೇಶವಾದಿ ನಾಮಗಳನ್ನು ಹೇಳುವಾಗ ೨೧ನೇ ನಾಮವೇ ಜನಾರ್ದನಾಯ ನಮಃ ಎನ್ನುವ ಸಂಪ್ರದಾಯವಿದೆ.

೮. ಶ್ರಾದ್ಧ ಮಾಡುವಾಗ ಮೊದಲು ಕಲಶ ಸ್ಥಾಪನೆ ಮಾಡಿದ ನಂತರ "ಅಸ್ಮತ್ ಅಮುಕ ಶ್ರಾದ್ಧ ಕರ್ಮಣಾ ಅಧಿಕಾರ ಪ್ರಾಪ್ಯರ್ಥಂ ಶ್ರೀಮಧ್ವಲ್ಲಭ **ಜನಾರ್ದನ**ಸ್ಯ ಸಮಾರಾಧನಂ ಕರಿಷ್ಯೇ" ಅಂತ ಸಂಕಲ್ಪ ಕಾಲದಲ್ಲಿ ಜನಾರ್ದನ ಸ್ವಾಮಿಯನ್ನು ಸ್ಮರಿಸುವ ಸಂಪ್ರದಾಯವಿದೆ.

೯. ಶ್ರಾದ್ಧ ಕರ್ಮದಲ್ಲಿ ವಿಶ್ವೇದೇವತೆಗಳನ್ನು, ಪಿತೃದೇವತೆಗಳನ್ನು ಆಹ್ವಾನಾದಿ ಪೂಜಾ ಆದ ನಂತರ ಆಯಾ ಬ್ರಾಹ್ಮಣರನ್ನು ಭೋಜನಕ್ಕೆ ಕೂಡಿಸುವಾಗ ಕರ್ತೃ ನಿಂತುಕೊಂಡು ಕೈಯಲ್ಲಿ ನೀರಿನ ಪಾತ್ರೆ ಹಿಡಿದು "ಏಕೋ ವಿಷ್ಣು......... ವಿಶ್ವಭುಗವ್ಯಯಃ ಅನೇನ ಪಿತೃಯಜ್ಞೇನ ಭಗವಾನ್ ಪಿತ್ರಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮ**ಜ್ಜನಾರ್ದನ** ವಾಸುದೇವ ಪ್ರಿಯಾತಾಂ ಪ್ರೀತೋರ್ಭವತು ಶ್ರೀ ಕೃಷ್ಣಾರ್ಪಣಮಸ್ತು" ಎಂದು ಹೇಳುವಾಗ ಜನಾರ್ದನ ದೇವರ ಸ್ಮರಿಸುವುದನ್ನು ಹೇಳಲಾಗಿದೆ.



೧೦. ಪಿಂಡ ಪ್ರದಾನಾ ನಂತರ ಸ್ಥಾಪಿತ ಬ್ರಾಹ್ಮಣರ ಆಜ್ಞಾ ಕೇಳಿ ಪಿಂಡಗಳನ್ನು ಉದ್ಯಾಸನಕ್ಕೆ ಅನುಮತಿ ಕೇಳುವಾಗ "ಪಿಂಡಾನ್ ಉದ್ಯಾಶಯಿಷ್ಯೇ" ಎಂದು ಹೇಳಿ ಅನುಮತಿ ಪಡೆದು "ಶ್ರೀಮ**ಜ್ಜನಾರ್ದನ** ವಾಸುದೇವ ಪ್ರಸೀದೋಸ್ತು" ಎಂದು ಜನಾರ್ದನ ಸ್ವಾಮಿಯನ್ನು ಸ್ಮರಣೆ ಮಾಡಬೇಕು.

೧೧. ಶ್ರಾದ್ಧ ಕರ್ಮ ಮುಗಿದ ನಂತರ ಬ್ರಾಹ್ಮಣ ಪ್ರಕ್ಷಾಳನ ತೀರ್ಥ, ಅಕ್ಷತೆ, ತಾಂಬೂಲಾದಿಗಳನ್ನು ಕೊಟ್ಟು ಉತ್ತಿಷ್ಟ ಎಂದು ವಿನಂತಿಸಿ ಬ್ರಾಹ್ಮಣರ ಆಶೀರ್ವಾದ ಕೇಳುವಾಗ "ಗೋತ್ರಾಭಿವೃದ್ಧಿರಸ್ತು – ಶ್ರೀ **ಜನಾರ್ದನ** ವಾಸುದೇವ ಪ್ರಸೀದೋಸ್ತು" ಎಂದು ಅವರಿಂದ ಅಕ್ಷತೆಗಳನ್ನು ಸ್ವೀಕರಿಸುವಾಗ ಶ್ರೀ ಜನಾರ್ದನನ ಸ್ಮರಣೆ ಇದೆ.

೧೨. ಕೊನೆಗೆ ಶ್ರಾದ್ಧ ಕರ್ಮ ಪೂರ್ಣವಾದ ನಂತರ "ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ......... ಇತ್ಯಾದಿ ಅನೇನ ಅಮುಕ .......... ಶ್ರಾದ್ಧಯಜ್ಞೇನ ಅಮುಕಾಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಧ್ವಲ್ಲಭ **ಜನಾರ್ದನ** ವಾಸುದೇವಃ ಪ್ರಿಯತಾಂ ಪ್ರೀತೋರ್ಭವತು" ಎಂದು ಜನಾರ್ದನಸ್ವಾಮಿಯನ್ನು ಸ್ಮರಿಸುವುದನ್ನು ತಿಳಿಸಲಾಗಿದೆ.

೧೩. ಹೀಗೆ ಜನಾರ್ದನ ದೇವರನ್ನು ಮುಖ್ಯವಾಗಿ ಶ್ರಾದ್ಧ ಕಾಲದಲ್ಲೇ ಸ್ಮರಿಸಿ ಅವನ ಪ್ರೀತ್ಯರ್ಥವಾಗಿ ಕರ್ಮ ಮಾಡುವುದಾಗಿ ತಿಳಿಸಲಾಗಿದೆ. ಬಾಕಿ ಶುಭಕಾರ್ಯಗಳಲ್ಲಿ ಜನಾರ್ದನಸ್ವಾಮಿಯನ್ನು ಸ್ಮರಿಸುವ ಪದ್ಧತಿ ಇರುವುದಿಲ್ಲ. ಮುಖ್ಯವಾಗಿ ಶ್ರಾದ್ಧ ಕರ್ಮಕ್ಕೆ ಅಧಿದೇವತೆ ಜನಾರ್ದನಸ್ವಾಮಿಯನ್ನೇ ಸ್ಮರಿಸಿ ಅವನ ಪ್ರೀತ್ಯರ್ಥವಾಗಿ ಕಾರ್ಯ ಮಾಡಬೇಕು. ಜನಾರ್ದನ ದೇವರು ಶ್ರೀಮನ್ನಾರಾಯಣ ರೂಪವೇ ಆಗಿದ್ದರೂ ಈ ಒಂದು ಕಾರ್ಯಕ್ಕೆ ಜನಾರ್ದನ ರೂಪಿ ನಾರಾಯಣನು ವಿಶೇಷ ಸಾನ್ನಿಧ್ಯವಿರುವುದಾಗಿ ತಿಳಿಯಬೇಕು.

ಇಷ್ಟು ಜನಾರ್ದನ ಸ್ವಾಮಿಯ ಬಗ್ಗೆ ತಿಳಿಸಲಾಗಿದೆ. ಆದರೆ, ಜನಾರ್ದನ ಸ್ವಾಮಿಯ ಕ್ಷೇತ್ರಗಳ ಬಗ್ಗೆ ತಿಳಿಯಲು ಪ್ರಯತ್ನ ಮಾಡೋಣ.

ಭಾರತದಲ್ಲಿ ನಮಗೆ ತಿಳಿದಂತೆ ಜನಾರ್ದನಸ್ವಾಮಿ ದೇವಾಲಯ ಕ್ಷೇತ್ರ ಒಂದೇ ಕಡೆ ಇರುವುದೆಂದು ಹೇಳಬಹುದು. ಅದೋ ಕೇರಳ

ರಾಜ್ಯ ಪಶ್ಚಿಮ ಸಮುದ್ರ ತೀರ (ತಿರುವನಂತಪುರದಿಂದ ಉತ್ತರಕ್ಕೆ ಕೊಲ್ಲಂ ೨೦ ಕಿ.ಮೀ. ದೂರದಲ್ಲಿ) ಅಟ್ಟಿಂಗಲ್‌ಗೆ ಪಶ್ಚಿಮ ವರ್ಕಲಾ ಎನ್ನುವಲ್ಲಿ ಕಾಣಬಹುದು. ಅಲ್ಲಿ ಸ್ವಲ್ಪ ಚಿಕ್ಕ ಬೆಟ್ಟದಂತಿರುವ ಮಂದಿರವಿದೆ. ವರ್ಕಲಾಕ್ಕೆ ರೈಲುಮಾರ್ಗ ಇದೆ. ವರ್ಕಲಾ ನಗರದಿಂದ ಮೂರು ಕಿ.ಮೀ. ಪಶ್ಚಿಮದಲ್ಲಿ ಜನಾರ್ದನ ಕ್ಷೇತ್ರವೆಂದು ಸುಪ್ರಸಿದ್ಧ. ಕ್ಷೇತ್ರದ ಸುತ್ತಲೂ ಮನೋಹರ ವಾತಾವರಣ ಕೆಳಗೆ ಒಂದು ವಿಶಾಲ ಪುಷ್ಕರಿಣಿ ಯಾತ್ರಿಕರು ತಂಗಲು ಛತ್ರವಿದೆ. ಛತ್ರದಲ್ಲಿ ಸಿಹಿನೀರಿನ ಭಾವಿಯಿದೆ. ಒಂದು ಕಿ.ಮೀ. ಪಶ್ಚಿಮಕ್ಕೆ ಸಮುದ್ರ. ಆನೆ ಎತ್ತರ ಅಲೆಗಳಿಂದ ಶೋಭಿಸುವುದು.

ದೇವಾಲಯ ಸಾಕಷ್ಟು ವಿಶಾಲವಿದ್ದು ಮಧ್ಯೆ ಶ್ರೀವಿಷ್ಣು (ಜನಾರ್ದನಸ್ವಾಮಿ) ಚಿಕ್ಕ ಮಂದಿರ ಗರ್ಭಗುಡಿ ಅಷ್ಟೇನೂ ದೊಡ್ಡದಾಗಿಲ್ಲದಿದ್ದರೂ ಭಕ್ತರು ಆ ಸ್ವಾಮಿಯನ್ನು ದರ್ಶನ ಮಾಡುವುದೇ ಒಂದು ಭಾಗ್ಯ. ಅಲಂಕೃತನಾದ ಸ್ವಾಮಿ ಗರ್ಭಗುಡಿಯಿಂದ ಎದ್ದು ಬರುತ್ತಾನೋ ಎನ್ನುವಂತೆ ಆಕರ್ಷಕ ಮೂರ್ತಿ. ವೈಷ್ಣವ ಸಂಪ್ರದಾಯದಂತೆ ಉಡುಪಿಯವರೇ ಪೂಜಿಸುತ್ತಾರೆ.

ಇಲ್ಲಿ ಜನಾರ್ದನಸ್ವಾಮಿಯ ಮೂರ್ತಿಯ ಭಂಗಿ ಚಕ್ರ, ಶಂಖ, ಗದಾ ಇದ್ದು ಬಲಗೈ ಕೆಳಗೆ ಆಪೋಶನ ಸ್ವೀಕರಿಸುವ ಭಂಗಿ (ಮುದ್ರ) ಇದೆ.

ತಂತ್ರಸಾರ ಸಂಗ್ರಹದಲ್ಲಿ ತಿಳಿಸಿದಂತೆ ಬಲಗೈ ಕೆಳಭಾಗದಲ್ಲಿ ಪದ್ಮ ಇರುವುದನ್ನು ಗಮನಿಸಿರಿ. ಇಲ್ಲಿ ತದ್ವಿರುದ್ಧವಾಗಿ ಬಲಗೈ ಕೆಳಭಾಗವು ಆಪೋಶನ ಸ್ವೀಕರಿಸುವ ರೀತ್ಯಾ ಇರುವುದು.

ಇದಕ್ಕೆ ಕಾರಣವೂ ಇರುವುದು. ವರ್ಕಲಾ ಜನಾರ್ದನಸ್ವಾಮಿ ದೇವಸ್ಥಾನದ ಅರ್ಚಕರನ್ನು ಕೇಳಿದಾಗ ಅಲ್ಲಿಯ ಸ್ಥಳ ಪುರಾಣ ಮಹಿಮೆ ಪ್ರಕಾರ ಹೀಗೆ ತಿಳಿಸಿದರು. ಧರ್ಮರಾಜಾದಿ ಪಾಂಡವರು ಮಾಯಾ ಜೂಜಾಟದಲ್ಲಿ ತಮ್ಮ ರಾಜ್ಯ ಸರ್ವಸ್ವವನ್ನೂ ಕಳೆದುಕೊಂಡು ೧೨ + ೩ ವರ್ಷ ವನವಾಸ ಮಾಡಲು ಹೊರಡುತ್ತಾರೆ. ಹೀಗೆ ದೇಶ ಸಂಚಾರ ಮಾಡುತ್ತಾ ದಕ್ಷಿಣ ಭಾರತಕ್ಕೆ ಬರುತ್ತಾರೆ. ಹೀಗೆ ಸಂಚರಿಸುತ್ತಾ ದಕ್ಷಿಣ ಭಾರತ ಪಶ್ಚಿಮ ತೀರ ಸಮುದ್ರದತ್ತ ಬರುತ್ತಾರೆ. ಈ ಕ್ಷೇತ್ರ ಪರುಶುರಾಮ ಕ್ಷೇತ್ರವೆಂದು ತಿಳಿದಾಗ ಅವರ ತಂದೆ ಪಾಂಡುರಾಜನ ವರ್ಷಾಬ್ದಿಕ ಕಾಲ



ಬರುತ್ತದೆ. ಆಗ್ಗೆ ಹತ್ತು ವರ್ಷಗಳು ವನವಾಸವಾಗುತ್ತದೆ. ತಮ್ಮ ಪಿತೃದೇವನ ಕಾಲ ಶ್ರಾದ್ಧ ಮಾಡಲು ಉದ್ದೇಶಿಸಿ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಆದರೆ ಅವರಿಗೆ ಬ್ರಾಹ್ಮಣರೇ ಸಿಗುವುದಿಲ್ಲ. ಆಪೋಶನ ಯಾರಿಗೆ ಕೊಡಬೇಕು ಎಂದು ವಿಚಾರಿಸುತ್ತಿದ್ದಾಗ ಪಾಂಡವರ ಬಂಧುರಕ್ಷಕನಾದ ಶ್ರೀಕೃಷ್ಣನೇ ಪ್ರತ್ಯಕ್ಷನಾಗಿ ''ಧರ್ಮನಂದನ ಚಿಂತಿಸಬೇಡ. ಆಪೋಶನ ನನ್ನ ಕೈಯಲ್ಲಿ ಹಾಕು'' ಎಂದನಂತೆ. ಧರ್ಮರಾಜನಿಗೆ ಅತ್ಯಂತ ಸಂತೋಷವಾಗಿ ಶ್ರೀಕೃಷ್ಣನ ಕೈಯಲ್ಲಿ ಆಪೋಶನ ಹಾಕಿದಾಗ ಭಗವಂತ ಶ್ರಾದ್ಧ ದೇವನಾಗಿ ಜನಾರ್ದನ ರೂಪದಿಂದ ಆಪೋಶನ ಸ್ವೀಕರಿಸಿದನು. ಅಂದಿನಿಂದ ಈ ಕ್ಷೇತ್ರವು ಜನಾರ್ದನ ಕ್ಷೇತ್ರವೆಂದು ಹೆಸರಾಯಿತು. ಇವತ್ತಿಗೂ ಅಲ್ಲಿ ಜನಾರ್ದನ ಕ್ಷೇತ್ರವೆಂದೇ ಪ್ರಸಿದ್ಧಿಯಾಗಿದೆ. ಅಂದಿನಿಂದ ಇಲ್ಲಿಯವರೆಗೆ (ದ್ವಾಪರ ಮಧ್ಯದಿಂದ ಪರಮ ವೈಷ್ಣವ ಕ್ಷೇತ್ರವಾಗಿ ವೈಷ್ಣವರು ಇಲ್ಲಿಗೆ ಬಂದು ಮಾತಾಪಿತೃಗಳ ಉದ್ದೇಶ ಶ್ರಾದ್ಧಕರ್ಮ ಮಾಡಿ ಶ್ರೀ ಜನಾರ್ದನ ಕೃಷ್ಣನಿಗೆ ಅರ್ಪಿಸುತ್ತಾರೆ.

ಆದ್ದರಿಂದ ಜನಾರ್ದನಸ್ವಾಮಿಯನ್ನು ಶ್ರಾದ್ಧಕಾಲದಲ್ಲಿ ಮಂತ್ರಗಳನ್ನು ಉಚ್ಚರಿಸುವ ಪದ್ಧತಿ ಬಂದಿದೆ. ವರ್ಕಲಾ ಈ ರೀತಿ ಜನಾರ್ದನ ಕ್ಷೇತ್ರವೆಂದೂ ಜನಾರ್ದನ ಸ್ವಾಮಿ ದೇವಾಲಯವಿರುವುದಾಗಿ ಪ್ರಸಿದ್ಧಿಯಾಗಿದೆ.

## ಜನಾರ್ದನಸ್ವಾಮಿಯ ಅನ್ಯ ಆಲಯಗಳು

ಜನಾರ್ದನಸ್ವಾಮಿಯ ಮಂದಿರವು ಕೇರಳದ ವರ್ಕಲಾದಲ್ಲಷ್ಟೇ ಇದೆ ಎಂದು ಸರ್ವೇ ಸಾಧಾರಣವಾಗಿ ಪ್ರತೀತಿ ಇದೆ. ಆದರೆ ಜನಾರ್ದನ ಸ್ವಾಮಿಯ ಮಂದಿರಗಳು ವರ್ಕಲಾ ಬಿಟ್ಟು ಬೇರೆ ಕಡೆಯೂ ಇರುವುದಾಗಿ ಗೊತ್ತಾಗಿದೆ. ಶೋಧನೆ ಮಾಡಿದಾಗ ವಿಷಯ ತಿಳಿದು ಬಂದಿದೆ.

ದಕ್ಷಿಣ ಕನ್ನಡ ನಾಡಿನಲ್ಲಿ ಕಾಸರಗೋಡಿನಿಂದ ಮಂಗಳೂರು ಪ್ರಾಂತ್ಯದಲ್ಲಿ ಪಯಸ್ವಿನೀ ನದಿ ಹರಿಯುವುದು. ಪೂರ್ವಕ್ಕೆ ಪಶ್ಚಿಮ ಘಟ್ಟಗಳು ಕೆಳಗೆ ಅರಬ್ಬಿ ಸಮುದ್ರ ಮಧ್ಯದಲ್ಲಿ ಅನೇಕ ಐತಿಹಾಸಿಕ ಪ್ರಸಿದ್ಧ ದೇವಾಲಯಗಳು ವೀಕ್ಷಕರ ಮನಸ್ಸನ್ನು ಆಕರ್ಷಿಸುತ್ತಿವೆ. ಅವುಗಳಲ್ಲಿ ಹತ್ತು ಜನಾರ್ದನ ದೇವಾಲಯಗಳು ಇರುವುದಾಗಿ ತಿಳಿದುಬಂದಿದೆ.

೧. ಮುಖ್ಯವಾಗಿ ಶ್ರೀಮನ್ಮಧ್ವಾಚಾರ್ಯರು ಅರಬ್ಬೀ ಸಮುದ್ರದಲ್ಲಿ ಮುಳುಗುತ್ತಿರುವ ಒಂದು ಹಡಗನ್ನು ಕಾಪಾಡಿ ಹಡಗಿನ ನಾಯಕನಿಂದ ಕೆಲ ಅಮೂಲ್ಯ ವಿಷ್ಣು ವಿಗ್ರಹಗಳನ್ನು ಪಡೆದುದಾಗಿ ಉಲ್ಲೇಖವಿದೆ. ಅವುಗಳಲ್ಲಿ ಉಡುಪಿಯಲ್ಲಿ ಶ್ರೀಕೃಷ್ಣಮೂರ್ತಿಯನ್ನು ಸ್ಥಾಪಿಸಿದರು. ಸಮುದ್ರತೀರದಲ್ಲಿ ಮಲ್ಪೆಯಲ್ಲಿ ಬಲರಾಮ ದೇವರ ಮೂರ್ತಿ (ವಡಬಂಡೇಶ್ವರ) ಸ್ಥಾಪನೆ ಮಾಡಿದರು. ಅಲ್ಲದೆ ಮೂರು ವಿಗ್ರಹಗಳಾದ ಜನಾರ್ದನ ಮೂರ್ತಿಯೊಂದನ್ನು ಯರರ್ಮೋಳು (ಪಡುಬಿದ್ರಿ ಉತ್ತರಕ್ಕೆ) ಎಂಬಲ್ಲಿ ಸ್ಥಾಪಿಸಿದರೆಂದು ಇತಿಹಾಸ ತೋರಿಸುವುದು.

ಪಲ್ಲವರ ಆಧಿಪತ್ಯದಲ್ಲಿರುವ ಅನೇಕ ಕನ್ನಡ ನಾಡುಗಳನ್ನು ವಶವಾಗಿ ಇಟ್ಟುಕೊಂಡಿದ್ದ ಉಡುಪಿಯಿಂದ ಸ್ವಲ್ಪ ದೂರ ಮೂಡು ಅಲೆವೂರಿನಲ್ಲಿ ಮಯೂರಶರ್ಮನೆಂಬ ಬ್ರಾಹ್ಮಣ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಂಚೀಪುರಂಗೆ ತೆರಳುತ್ತಾನೆ. ಆದರೆ ಇವ ಕನ್ನಡದವನೆಂದು ಮರ್ಯಾದೆ ಸಿಗದೆ ಅವಮಾನಿತನಾಗಿ ಹಿಂತಿರುಗುತ್ತಾನೆ. ತಮಿಳುನಾಡಿನ ಅರಸರ ಮೇಲೆ ಸೇಡು ತೀರಿಸಿಕೊಳ್ಳಲು ವೇಲಾಪುರಿ (ಈಗಿನ ಬಳ್ಳಾರಿ) ಕುಂತಲ ದೇಶದ ಬೇಡ ಜನಾಂಗದ ಸಖ್ಯ ಮಾಡಿ ಅವರ ಸಹಾಯದಿಂದಾಗಿ ಪಲ್ಲವರಿಗೆ ತಲೆನೋವು ಉಂಟುಮಾಡುತ್ತಾನೆ. ಕದಂಬ ರಾಜ್ಯವನ್ನು ಸ್ಥಾಪಿಸಲು ಸರ್ವ ಪ್ರಯತ್ನ ಮಾಡುತ್ತಾನೆ. ಕೊನೆಗೆ ಪಲ್ಲವರು ಇವನೊಂದಿಗೆ ಸ್ನೇಹ ಬೆಳೆಸಿ ಬನವಾಸಿಯ ರಾಜನೆಂದು ಸ್ವೀಕರಿಸುತ್ತಾರೆ. ಮಯೂರಶರ್ಮ ಜನ್ಮತಃ ಬ್ರಾಹ್ಮಣನಾದರೂ ತನ್ನ ಹೆಸರನ್ನು ಮಯೂರ ವರ್ಮನೆಂದು ಬದಲಾಯಿಸಿಕೊಂಡು ಕ್ಷತ್ರಿಯನಂತೆ ರಾಜ್ಯವಾಳುತ್ತಾನೆ.

೨. ಕರ್ನಾಟಕದಲ್ಲಿ ಪ್ರಪ್ರಥಮ ಕನ್ನಡ ರಾಜ್ಯ ಸ್ಥಾಪನೆ ಮಯೂರ ವರ್ಮನಿಂದಾಯಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಮಯೂರ ವರ್ಮನು ಬ್ರಾಹ್ಮಣ ಅರಸನಾಗಿ ಅಚ್ಛಿಛತ್ರದಿಂದ ೬೪ಕ್ಕೂ ಹೆಚ್ಚು ಬ್ರಾಹ್ಮಣ ಶ್ರೋತ್ರೀಯ ವಿದ್ವಾಂಸರನ್ನು ಕರೆಸಿ ಕನ್ನಡ ದೇಶದಲ್ಲಿ ನೆಲೆಸುವ ಹಾಗೆ ಮಾಡಿ ಕೀರ್ತಿವಂತನಾದ.

ಇದೇ ರೀತಿ ಈ ಕದಂಬ ಮಯೂರ ರಾಜನು ಮೂಡು ಅಲೆ ಊರಿನಲ್ಲಿ ಜನಾರ್ದನ ದೇವಾಲಯವನ್ನು ಸ್ಥಾಪಿಸಿದನು.



ಇಲ್ಲಿಯ ಜನಾರ್ದನಸ್ವಾಮಿ (ವಿಷ್ಣು) ಚತುರ್ಭುಜದಿಂದ ವಿರಾಜಿಸುತ್ತಾನೆ. ಇಲ್ಲಿ ಮಾತಾಪಿತೃಗಳು ಅವರಿಗೆ ಸದ್ಗತಿಯಾಗುವುದಕ್ಕಾಗಿ ಪಿಂಡ ಪ್ರದಾನ ಮಾಡಲು ಶ್ರೀಜನಾರ್ದನಸ್ವಾಮಿ ಪಿತೃದೇವತೆಯಾಗಿ ಪಿಂಡವನ್ನು ಸ್ವೀಕರಿಸಲು ತನ್ನ ಬಲಗೈ ಕೆಳಭಾಗದಲ್ಲಿ ಪಿಂಡ ಸ್ವೀಕಾರ ಭಂಗಿಯು ಇರುವುದು.

೩. ದ್ವಾರಸಮುದ್ರವೆಂದು ಹೆಸರಾಂತ ಬೇಲೂರು, ಹಳೇಬೀಡಿನ ಹೊಯ್ಸಳ ಅರಸನಾದ ವಿಷ್ಣುವರ್ಧನನು ಚೆನ್ನಕೇಶವಮೂರ್ತಿಯನ್ನು ಸ್ಥಾಪಿಸಿ ಕಾರ್ಕಳದ ಹತ್ತಿರ ಅಜೇಕಾರು ಎಂಬಲ್ಲಿ ಜನಾರ್ದನ ದೇವಾಲಯವಿರುವುದು.

೪. ಕುಂದಾಪುರ ಹತ್ತಿರ ಕೋಟೇಶ್ವರ ಹುದ್ರಾಳಿಯಲ್ಲಿರುವ ಜನಾರ್ದನ ಮಂದಿರವು ಅತಿ ಪುರಾತನವೆಂಬುದಾಗಿ ದೇವಾಲಯವು ಶಿಲ್ಪಕಲಾತ್ಮಕವಾಗಿರುವುದು.

೫. **ಕಾಪೂರು :** ಉಡುಪಿಯಿಂದ ಸ್ವಲ್ಪ ದೂರದಲ್ಲಿ ಜನಾರ್ದನ ಆಲಯವು ಇರುವುದು.

೬. ಕುಂದಾಪುರ ಮಠದಲ್ಲಿ ಜನಾರ್ದನ ಮೂರ್ತಿಯೊಂದಿಗೆ ವರಾಹ ನೃಸಿಂಹ ಮೂರ್ತಿಗಳು ಸ್ಥಾಪಿತವಾಗಿರುವುದು.

೭. ಗೋಕರ್ಣ ಕ್ಷೇತ್ರದಲ್ಲಿ ಜನಾರ್ದನಸ್ವಾಮಿಯ ವಿಗ್ರಹದ ಕೈಯಲ್ಲಿ ಪಿಂಡ ಧರಿಸಿದಂತೆ ಕೆತ್ತನೆ ಇದೆ.

೮. ಪುತ್ತೂರು ಸಮೀಪ ಕುಂಜಾರುವಿನಲ್ಲಿ ಜನಾರ್ದನಸ್ವಾಮಿಯನ್ನು ಮದಗಜನಾರ್ದನ ಮಂದಿರ ವೈಭವ ಪೂರ್ಣವಾಗಿರುವುದು.

೯. ಪುತ್ತೂರು ಸಮೀಪ ಕುಡುಪಾಡಿಯಲ್ಲಿ ಜನಾರ್ದನಸ್ವಾಮಿಯನ್ನು ವೀಕ್ಷಿಸುವುದೇ ಒಂದು ಹಬ್ಬ. ಇದನ್ನು ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದರು. ಈ ಜನಾರ್ದನ ಮೂರ್ತಿಯನ್ನು ಆಚಾರ್ಯ ಮಧ್ವರೇ ಪೂಜಿಸಿದರೆಂದು ಪ್ರತೀತಿ. ಇಲ್ಲಿ ಒಂದು ಪುಷ್ಕರಿಣಿಯೂ ಇರುವುದು. ದೇವಾಲಯವು ಮರದ ಕೆತ್ತನೆ ಕಲೆಯಿಂದ ಶೋಭಿಸುವುದು. ವಿಶೇಷವಾಗಿ ಇಲ್ಲಿ ಅನೇಕ ಜನರು ಬಂದು ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ. ವೈಷ್ಣವ ಕ್ಷೇತ್ರವೆಂದೆನಿಸಿ ಈ ಮಂದಿರಕ್ಕೂ ಉಡುಪಿಯ

ಪರ್ಯಾಯ ಸ್ವಾಮಿಗಳಿಗೆ ಸಂಬಂಧವಿರುವುದೆಂದು ಶ್ರೀಮದಾಚಾರ್ಯರ ಕಾಲದಿಂದಲೂ ನಡೆದುಬಂದಂತೆ ಪರ್ಯಾಯ ಪೀಠಾರೋಹಣ ಪೂರ್ವದಲ್ಲಿ ಜನಾರ್ದನಸ್ವಾಮಿ ದರ್ಶನ ಮಾಡುವ ಸಂಪ್ರದಾಯವಿರುವುದು.

೧೦. ದೊಡ್ಡಬಳ್ಳಾಪುರ ದೊಡ್ಡಪೇಟೆಯಲ್ಲಿ ಜನಾರ್ದನಸ್ವಾಮಿಯ ಮಂದಿರವು ಇವತ್ತಿಗೂ ಕಾಣುವುದಲ್ಲದೆ ಪ್ರಖ್ಯಾತವಾಗಿ ಇಂದಿಗೂ ಪೂಜಾ ಕೈಂಕರ್ಯ ನಡೆಸುತ್ತಿರುವುದು ವಿಶೇಷವು.

ಹೀಗೆ ಜನಾರ್ದನಸ್ವಾಮಿಯ ಆಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕದಲ್ಲಿ ಕಾಣಬಹುದು.

೧೧. ಉತ್ತರ ಭಾರತದಲ್ಲಿ ಗಯಾ ಕ್ಷೇತ್ರದಲ್ಲಿ ಗಯಾ ಗದಾಧರನ ಮಂದಿರ ವಿಷ್ಣುಪಾದಕ್ಕೆ ಪೂರ್ವ ದಿಕ್ಕಿನಲ್ಲಿ ಗಯಾ ಗದಾಧರ ರೂಪಿ ಜನಾರ್ದನಸ್ವಾಮಿಯ ವಿಗ್ರಹವು ಇರುವುದು. ಇಂತು ಜನಾರ್ದನಸ್ವಾಮಿ ಪಿತೃದೇವನೆಂದು ತನ್ನ ಸನ್ನಿಧಾನದಲ್ಲಿ ಯಾತ್ರಿಕರು ತಮ್ಮ ಪೂರ್ವೀಕರ ಸದ್ಗತಿ ಪ್ರಾಪ್ತಿಗಾಗಿ ಸ್ವಾಮಿಯ ಸನ್ನಿಧಾನದಲ್ಲಿ ಪಿತೃಕಾರ್ಯಗಳನ್ನು ಮಾಡುವ ಸತ್ಸಂಪ್ರದಾಯವಿರುವುದನ್ನು ಇಂದಿಗೂ ಕಾಣಬಹುದು.

ಶ್ರೀಲಕ್ಷ್ಮೀ ಜನಾರ್ದನಸ್ವಾಮಿ ಶ್ರೀ ಕೃಷ್ಣಾರ್ಪಣಮಸ್ತು

ಕಾರ್ತೀಕ ಕೃಷ್ಣ ತದಿಗೆ ಸಂಗ್ರಹ ನಿರೂಪಣೆ
೨೭–೧೧–೨೦೦೭ ಪ್ರೊ|| ಪಂ|| ಬದರೀನಾಥಾಚಾರ್ ಘೂಳಿ